12. ಚಿಕ್ಕಮಗಳೂರು ಜಿಲ್ಲಾ ನರಸಿಂಹರಾಜಪುರ ತಾಲೂಕು ತಹಸೀಲ್ದಾರ್‌ರವರ ವರ್ತನೆಯ ಬಗ್ಗೆ

ಶ್ರೀ ಕೆ. ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲಾ ನರಸಿಂಹರಾಜಪುರ ತಾಲ್ಲೂಕು ಬಾಳೆಹೊನ್ನೂರು ಹೋಬಳಿ ಗುಬ್ಬಿಗಾ ಗ್ರಾಮದ ಸರ್ಕಾರಿ ಸರ್ವೆ ನಂಬರ್ ೭,೮೯ರಲ್ಲಿ ಬಗರ್ ಹುಕುಂ ಸಾಗುವಳಿಯಿಂದ ಕಾಫಿಪ್ಲಾಂಟರ್ ನರಸಿಂಹರಾಜಪುರ ವಾಸಿ ಡಿ. ಕೆ. ರಂಗಪ್ಪ ಬಿನ್ ಕೃಷ್ಣಪ್ಪ ಎಂಬುವವರು ಮಾಡಿದ ಬಗ್ಗೆ ತಾಲ್ಲೂಕು ತಹಸೀಲ್ದಾರ್‌ರವರು ೧,೩೦, ೭೩೨-೪೦ ರೂ. ಗಳನ್ನು ದಂಡ (ಟಿ. ಟಿ) ವಿಧಿಸಿದ್ದು, ಇದರಂತೆ ಈ ತಾಲ್ಲೂಕಿನಲ್ಲಿ ಇನ್ನೂ ಅನೇಕ ಜನಗಳು ಬಗರ್ ಹುಕುಂ ಸಾಗುವಳಿಯಿಂದ ಕಾಫಿ ಪ್ಲಾಂಟ್ ಮಾಡಿದ್ದು ಅವರಿಗೆಲ್ಲಾ ಕೇವಲ ೫೦ ರಿಂದ ೮೦ ರೂಪಾಯಿಯವರೆಗೆ ಮಾತ್ರ ಟಿ.ಟಿ. ವಿಧಿಸಿ ನಮಗೆ ಮಾತ್ರ ಹೆಚ್ಚಿಗೆ ಟಿ.ಟಿ. ವಿಧಿಸಿದ್ದಾರೆಂದು ಈ ತಾರತಮ್ಯದ ನೀತಿಯನ್ನು ವಿರೋಧಿಸಿ ೧೭-೩-೮೮ ರಂದು ಡಿ.ಕೆ. ರಂಗಪ್ಪನವರು ತರೀಕೆರೆ ಕ್ಷೇತ್ರದ ಶಾಸಕರಾದ ಶ್ರೀ ಬಿ, ಆರ್. ನೀಲಕಂಠಪ್ಪನವರ ಜೊತೆ ಕಂದಾಯ ಮಂತ್ರಿಗಳನ್ನು ಭೇಟಿಯಾಗಿದ್ದರು. ದಿನಾಂಕ ೧೭-೩-೮೮ ರಂದು ಕಂದಾಯ ಮಂತ್ರಿಗಳು ಎಂ,ಆರ್.ಪಿ. ಪಿ.ಎಸ್. ೧೭೦೬-೮೭-೮೮ರಂತೆ ತಡೆಯಾಜ್ಞೆ ನೀಡಿರುತ್ತಾರೆ.

ಮಂತ್ರಿಗಳ ತಡೆಯಾಜ್ಞೆ ತಹಸೀಲ್ದಾರ್‌ರವರಿಗೆ ೧೯-೩-೮೮ರಂದು ತಲುಪಿದ್ದು ಈ ಆಜ್ಞೆಯನ್ನು ಉಲ್ಲಂಘಿಸಿ ಮಂತ್ರಿಗಳು ರಾಜಕೀಯ ಮಾಡಲು ಏನು ಬೇಕಾದರೂ ಆದೇಶ ನೀಡುತ್ತಾರೆ, ನಾವು ಕಾನೂನು ಪಾಲಕರು, ನಮಗೂ ಮಂತ್ರಿಗಳಿಗೂ ನೇರ ಸಂಬಂಧ ಎಲ್ಲ ಎಂದು ದರ್ಪದ ಮಾತುಗಳನ್ನಾಡಿದ್ದಾರೆಂದು ದಿನಾಂಕ ೧೬-೫-೮೮ ರಂದು ಪ್ರಕಟವಾದ ಪ್ರಜಾ ಸ್ಪಂದನ ಕನ್ನಡ ವಾರಪತ್ರಿಕೆ ಪುಟ ೨ ರಲ್ಲಿ ತಹಸೀಲ್ದಾರ್‌ರವರ ತೊಗಲಕ್ ದರ್ಬಾರು ಎಂಬ ವರದಿ ಬಂದಿರುತ್ತದೆ. ನಂತರ ತಹಸೀಲ್ದಾರ್‌ರವರು ಮುಂದುವರೆದು ಡಿ.ಕೆ. ರಂಗಪ್ಪನವರ ಹೊಲ ಜಪ್ತಿ ಮಾಡಿದ್ದಾರೆ. ಜಪ್ತಿ ಮಾಡಿದನಂತರ ಹೊಲವನ್ನು ೨೮-೩-೮೮ ರಂದು ಹರಾಜ್ ಹಾಕುವುದಾಗಿ ಟಾಂಟಾಂ ಮೂಲಕ ಪ್ರಚಾರ ಪಡಿಸಿ ಕರಪತ್ರದ ಮೂಲಕ ಮತ್ತು ಪತ್ರಿಕಾ ಪ್ರಕಟಣೆಯ ಮೂಲಕ ಪ್ರಚಾರ ಮಾಡಿ ಸರ್ಕಾರದ ಬೊಕ್ಕಸಕ್ಕೆ ಸಹಸ್ರಾರು ರೂಪಾಯಿ ನಷ್ಟ ಉಂಟು ಮಾಡಿದ್ದಾರೆ.

ಕಂದಾಯ ಮಂತ್ರಿಗಳ ಆದೇಶವನ್ನು ಧಿಕ್ಕರಿಸಿದ ತಹಸೀಲ್ದಾರ್‌ರವರ ವರ್ತನೆ ಸಾರ್ವಜನಿಕರಲ್ಲಿ ಕಂತೂಹಲ ಕೆರಳಿಸಿದೆ. ಈ ಪ್ರಕರಣದ ಬಗ್ಗೆ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕು ಬಾಳೆಹೊನ್ನೂರು ಹೋಬಳಿ ಗುಬ್ಬಿಗಾ ಗ್ರಾಮದ ಸರ್ವೆ ನಂ. ೭ರಲ್ಲಿ ವಿಸ್ತೀರ್ಣ ೮ ಎಕರೆ, ಸರ್ವೆ ನಂ. ೮ರಲ್ಲಿ ವಿಸ್ತೀರ್ಣ ೧ ಎಕರೆ, ಸರ್ವೆ ನಂ.೯ ರಲ್ಲಿ ವಿಸ್ತೀರ್ಣ ೩೦ ಎಕರೆ ಮತ್ತು ಸರ್ವೆ ನಂ. ೨೪ರಲ್ಲಿ ವಿಸ್ತೀರ್ಣ ೨ ಎಕರೆ, ಒಟ್ಟು ೪೧ ಎಕರೆ ಜಮೀನನ್ನು ಒತ್ತುವರಿ ಮಾಡಿ ಕಾಫಿ ಗಿಡಗಳನ್ನು ಸುಮಾರು ೧೮ ವರ್ಷಗಳ ಹಿಂದೆ ಅನಧಿಕೃತವಾಗಿ ನರಸಿಂಹರಾಜಪುರ ವಾಸಿ ಶ್ರೀ ಡಿ.ಕೆ. ರಂಗಪ್ಪನವರು ಹಾಕಿರುತ್ತಾರೆ. ಆದ್ದರಿಂದ ಸದರೀ ಒತ್ತುವರಿದಾರರಿಗೆ ೧೯೮೯-೯೦ನೇ ಸಾಲಿನಿಂದ ೧೯೮೩-೮೪ನೇ ಸಾಲಿನವರೆಗೆ ದಂಡವನ್ನು ಈ ಕೆಳಕಂಡಂತೆ ವಿಧಿಸಲಾಗಿರುತ್ತದೆ.—

೧) ಮೊದಲನೇ ೫ ವರ್ಷಗಳಿಗೆ ಎಕರೆ ಒಂದಕ್ಕೆ ೧ ವರ್ಷಕ್ಕೆ ರೂ. ೧೨೦ರಂತೆ

೨) ನಂತರದ ೫ ವರ್ಷಗಳಿಗೆ ಎಕರೆ ಒಂದಕ್ಕೆ ೧ ವರ್ಷಕ್ಕೆ ರೂ. ೧೮೦ರಂತೆ

೩) ಉಳಿದ ೫ ವರ್ಷಗಳಿಗೆ ಎಕರೆ ಒಂದಕ್ಕೆ ಒಂದು ವರ್ಷಕ್ಕೆ ರೂ. ೨೫೦ರಂತೆ

ಮತ್ತು ಭೂ ಕಂದಾಯ ಕಾಯಿದೆ ೧೯೬೪ರ ಸೆಕ್ಷನ್ ೯೪ (೧)ರ ಪ್ರಕಾರ ೨ ಪಟ್ಟು ಕಂದಾಯ ಮತ್ತು ಇತರೆ ಆಗುಪ ಸೆಸ್ಸುಗಳನ್ನು ವಿಧಿಸಲಾಗಿದೆ. ಆ ಪ್ರಕಾರ ಒಟ್ಟು ರೂ.೩೦೮೫೩-೪೦ ಪೈಸೆ ಹಣವನ್ನು ಸರ್ಕಾರಕ್ಕೆ ಕಟ್ಟಲು ದಿನಾಂಕ ೧೮-೫-೮೪ರಂದು ನೋಟೀಸ್ ನೀಡಿಲಾಗಿದ್ದಿತು.

ಈ ಪ್ರಕರಣವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸಲಾಗಿದ್ದು, ಅದು ದಿನಾಂಕ ೨೭-೩-೮೬ರಂದು ವಜಾ ಆಗಿರುತ್ತದೆ. ಈ ವಿಷಯದ ಬಗ್ಗೆ

ಡಿ.ಕೆ. ರಂಗಪ್ಪ ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿರು ತ್ತಾರೆ. (ಶಿಂಷಿ.ಲೆರೆ) ಉಚ್ಚ ನ್ಯಾಯಾಲಯವು ದಿನಾಂಕ ೨೫-೩-೮೮ ರಂದು ತಡೆ ಆಜ್ಞೆ ನೀಡಿರುತ್ತದೆ ಮತ್ತು, ಈ ಪ್ರಕರಣವು ನ್ಯಾಯಾಲಯದ ಮುಂದೆ ಇರುವುದರಿಂದ ಚರ್ಚೆಯು ಸಬ್‌ಜುಡಿಸ್ ಆಗುವುದು. ಮತ್ತೆ ಹೈಕೋರ್ಟಿನಲ್ಲಿ ಸ್ಟೇ ಇದೆ. ನ್ಯಾಯಾಲಯದಲ್ಲಿ ಏನು ತೀರ್ಪು ಬರುತ್ತದೆಯೋ ಆ ಪ್ರಕಾರ ನಡೆದುಕೊಳ್ಳುತ್ತೇವೆ. ಇನ್ನು ತಹಶೀಲ್ದಾರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

1988ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು) —ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜೀವರಾಜ ಆಳ್ವ (ಮಾನ್ಯ ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು. —ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ.*

ವಿತ್ತೀಯ ಕಾರ್ಯಕಲಾಪಗಳು

ಶ್ರೀ ರಮೇಶ್ ಸಿ ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ರಾಜ್ಯ ಸಚಿವರು)—ಸನ್ಮಾನ್ಯ ಅಧ್ಯಕ್ಷರೇ,

ಅಭಿಯಾಚನೆ ಕ್ರಮಾಂಕ 13 ಮತ್ತು 7

(ಗಣಿ, ಭೂವಿಜ್ಞಾನ ಮತ್ತು ಯಂಗವಜನ ಸೇವಾ ಇಲಾಖೆಗಳು)

ಅಭಿಯಾಚನೆ ಕ್ರಮಾಂಕ ೧೩ ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೪೧,೯೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನು ದಾನದಲ್ಲಿ ಮುಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

---

*Annexure